ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1297
ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು	ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	15-03-2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ದಿನಾಂಕ:01-03-2021ರಿಂದ ದೇಶಾದ್ಯಂತ ಎರಡನೇ ಹಂತದ ಕೋವಿಡ್-19 ವ್ಯಾಕ್ಸಿನ್ ಚುಚ್ಚುಮದ್ದು ನೀಡಲು ನೋಂದಣಿ ಪ್ರಕ್ರಿಯೆ ಕೇಂದ್ರ ಸರ್ಕಾರದ COWIN Portal ನಲ್ಲಿ ಆರಂಭಗೊಂಡಿದ್ದು, ಈ ರೀತಿ ಚುಚ್ಚುಮದ್ದು ಪಡೆಯಲು ಅರ್ಹರಾಗಿರುವ ನಾಗರೀಕರು ಸ್ವಯಂ ನೋಂದಣಿ ಮಾಡಲು ಪ್ರಯತ್ನಿಸಿದಾಗ COWIN Online Portal ಅಥವಾ ಆರೋಗ್ಯ ಸೇತು ಅಪ್ಲಿಕೇಷನ್ ಸರಿಯಾಗಿ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಕೈಗೊಂಡ ಕ್ರಮಗಳೇನು;	ಹೌದು, ಸರ್ಕಾರದ ಗಮನಕ್ಕೆ ಬಂದಿದೆ. ಆರಂಭಿಕ ದಿನಗಳಲ್ಲಿ COWIN 2.0 ಅನುಷ್ಠಾನಗೊಳಿಸಿದಾಗ COWIN ಪೋರ್ಟಲ್‌ನಲ್ಲಿ ಆನ್-ಲೈನ್ ನೋಂದಣಿ ಮಾಡಲು ಪ್ರಯತ್ನಿಸಿದಾಗ ಓಟಿಪಿ ಪಡೆಯುವಲ್ಲಿ ವಿಳಂಬವಾಗುತ್ತಿದ್ದ ಮಾಹಿತಿ, ಸರ್ಕಾರದ ಗಮನಕ್ಕೆ ಬಂದಿದ್ದು, ರಾಜ್ಯವು ಭಾರತ ಸರ್ಕಾರಕ್ಕೆ ತಿಳಿಸಿದೆ. ತದನಂತರ ಸಮಸ್ಯೆಯು ಪರಿಹರಿಸಲ್ಪಟ್ಟಿದೆ ಹಾಗೂ ಇದನ್ನು ಖಚಿತಪಡಿಸಿಕೊಳ್ಳಲಾಗಿದೆ. COWIN 2.0 ನಲ್ಲಿ ಅರ್ಹ ಫಲಾನುಭವಿಗಳ ಆನ್-ಲೈನ್ ನೋಂದಣಿಗೆ ಕೂಡ ಅವಕಾಶವಿದ್ದು ಆನ್-ಲೈನ್ ನೋಂದಣಿ ಸಾಧ್ಯವಾಗದೇ ಇದ್ದಲ್ಲಿ ಆನ್-ಸೈಟ್ ಮುಖಾಂತರ ನೋಂದಾಯಿಸಿ ಲಸಿಕೆ ಪಡೆಯಲು ಇಚ್ಚಿಸುವ ಅರ್ಹ ಫಲಾನುಭವಿಗಳಿಗೆ ಅವರ ಆಯ್ಕೆಯ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆಯನ್ನು ನೀಡಲಾಗುತ್ತಿದೆ.
ಆ	ಇಂತಹ Software ದೋಷಗಳ (Gliches) ಅನ್ನು ತುರ್ತಾಗಿ ಸರಿಪಡಿಸದಿದ್ದಲ್ಲಿ, ನಾಗರೀಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂಬುದು ಸರ್ಕಾರ ಗಮನಿಸಿದೆಯೇ; ದೋಷಗಳನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮವೇನು?	ಸರ್ಕಾರದ ಗಮನಕ್ಕೆ ಬಂದಿದೆ. Software ದೋಷಗಳನ್ನು ಸರಿಪಡಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. • ರಾಜ್ಯದಲ್ಲಿ ಯು.ಎನ್.ಡಿ.ಪಿ ಸಂಸ್ಥೆಯು ಆರೋಗ್ಯ ಇಲಾಖೆಯೊಂದಿಗೆ ಕೆಲಸ ನಿರ್ವಹಿಸುತ್ತಿದ್ದು COWIN 2.0 ಪೋರ್ಟಲ್‌ಗೆ ಸಂಬಂಧಿಸಿದ ತರಬೇತಿ, ತಾಂತ್ರಿಕ ಸಲಹೆ ಮತ್ತು ಸಮಸ್ಯೆಯು ಉದ್ಭವಿಸಿದಾಗ ಪರಿಹಾರೋಪಾಯವನ್ನು ನೀಡುತ್ತಿದೆ. • ಜಿಲ್ಲಾ ಮಟ್ಟದಲ್ಲಿ ಯು.ಎನ್.ಡಿ.ಪಿ ಇಂದ ನಿಯೋಜಿಸಲಾದ ವ್ಯಾಕ್ಸಿನ್ ಕೋಲ್ಡ್ ಚೈನ್ ಮ್ಯಾನೇಜರ್‌ಗಳು (WCCM) ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರುಗಳು ಜಿಲ್ಲಾ ಮಟ್ಟದಲ್ಲಿ COWIN 2.0 ಪೋರ್ಟಲ್‌ಗೆ ಸಂಬಂಧಿಸಿದ ತರಬೇತಿ, ತಾಂತ್ರಿಕ ಸಲಹೆ ಮತ್ತು ಸಮಸ್ಯೆಯು ಉದ್ಭವಿಸಿದಾಗ ಪರಿಹಾರೋಪಾಯವನ್ನು

		ನೀಡುತ್ತಿದ್ದಾರೆ. • COWIN 2.0 ಪೋರ್ಟಲ್‌ಗೆ ಸಂಬಂಧಿಸಿದ software ದೋಷಗಳನ್ನು (Glitches) ಪರಿಹರಿಸಲು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ನಿಯಂತ್ರಣ ಕೊಠಡಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ನುರಿತ ತಾಂತ್ರಿಕ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದು, ಜಿಲ್ಲೆಗಳಲ್ಲಿ ಉದ್ಭವಿಸುವ ತಾಂತ್ರಿಕ ತೊಂದರೆಗಳನ್ನು ಪರಿಹರಿಸಲಾಗುತ್ತಿದೆ. • ಜಿಲ್ಲಾ ಮಟ್ಟದಲ್ಲಿ ಪರಿಹರಿಸಲು ಸಾಧ್ಯವಾಗದಿದ್ದ ದೋಷಗಳನ್ನು ರಾಜ್ಯದ ನಿಯಂತ್ರಣ ಕೊಠಡಿಗೆ ಸಂಪರ್ಕಿಸಿ ಪರಿಹಾರ ಪಡೆಯುತ್ತಿದ್ದಾರೆ. ಈ ಕುರಿತು ಪ್ರತಿ ದಿನ ಬಳಕೆದಾರರಿಂದ ಪಡೆಯಲಾಗುವ software ದೋಷಗಳ (Glitches) ಪ್ರತಿಕ್ರಿಯೆ (Feedback) ಗಳನ್ನು ಭಾರತ ಸರ್ಕಾರಕ್ಕೆ ತಕ್ಷಣ ಕಳುಹಿಸಲಾಗುತ್ತಿದೆ ಮತ್ತು ಅನುಸರಣೆ ಮಾಡಲಾಗುತ್ತಿದೆ ಇಂತಹ software ದೋಷಗಳನ್ನು ಭಾರತ ಸರ್ಕಾರದ ವತಿಯಿಂದ ಸರಿಪಡಿಸಲಾಗುತ್ತಿದೆ.
ಇ	ಮೊದಲ ಹಂತದಲ್ಲಿ Covid-19 Vaccine ಚುಚ್ಚುಮದ್ದು ಪಡೆದ ಆರೋಗ್ಯ ಸೇನಾನಿಗಳಲ್ಲಿ ಬಹುತೇಕ ಮಂದಿಗೆ ಸೌಮ್ಯವಾಗಿ ಜ್ವರ, ಶೀತ, ಕೆಮ್ಮು, ನೆಗಡಿ ಮೈಕೈ ನೋವು ಕಾಣಿಸಿಕೊಂಡಿರುವುದು ನಿಜವೇ; ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಮುಂಜಾಗ್ರತಾ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ನಿಜ. ಇದನ್ನು ಪರಿಹರಿಸಲು ಸರ್ಕಾರ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. 1. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಲಸಿಕೆಗಳನ್ನು ಮೊದಲ್ಗೊಂಡಂತೆ ಕೋವಿಡ್ ಲಸಿಕೆಗಳೂ ಸೇರಿದಂತೆ ಸಾಮಾನ್ಯವಾಗಿ ಯಾವುದೇ ಲಸಿಕೆ ಪಡೆದ ನಂತರ ಸೌಮ್ಯ ಜ್ವರ, ಲಸಿಕೆ ಪಡೆದ ಜಾಗದಲ್ಲಿ ಸಣ್ಣ ಪ್ರಮಾಣದ ಊತ, ಮೈಕೈನೋವು ಇಂತಹ ಸಣ್ಣ ಪುಟ್ಟ ಅಡ್ಡಪರಿಣಾಮಗಳು ಉಂಟಾಗಬಹುದು. ಇಂತಹ ಅಡ್ಡಪರಿಣಾಮಗಳ ಕುರಿತು ಲಸಿಕೆ ಪಡೆದ ಫಲಾನುಭವಿಗೆ ಮೊದಲೇ ಮಾಹಿತಿ ನೀಡಲಾಗುತ್ತಿದೆ ಮತ್ತು ಅಂತಹ ಅಡ್ಡಪರಿಣಾಮಗಳು ಉಂಟಾದಾಗ ಪರಿಹಾರೋಪಯಗಳನ್ನು ಸಹ ತಿಳಿಸಲಾಗುತ್ತಿದೆ. 2. ಲಸಿಕೆ ನೀಡಿದ ನಂತರ 30 ನಿಮಿಷಗಳ ಕಾಲ ಎಲ್ಲಾ ಫಲಾನುಭವಿಗಳನ್ನು ಲಸಿಕಾ ಸ್ಥಳದಲ್ಲಿಯೇ ಇರಿಸಿಕೊಂಡು ಗಮನಿಸಲಾಗುತ್ತದೆ. 3. ಎಲ್ಲಾ ಲಸಿಕಾ ಸ್ಥಳಗಳಲ್ಲಿ ಪ್ಯಾರಸಿಟಮಲ್ ಮಾತ್ರೆ ಅನ್ನು ಇರಿಸಲಾಗಿದೆ. ಜ್ವರ, ಮೈಕೈನೋವು ಉಂಟಾದರೆ ಪ್ಯಾರಸಿಟಮಲ್ ಮಾತ್ರೆ ತೆಗೆದುಕೊಳ್ಳಲು ನೀಡಲಾಗುತ್ತಿದೆ. 4. ಹೆಚ್ಚಿನ ಮಟ್ಟದ ತೊಂದರೆಯುಂಟಾದಾಗ ಎ.ಇ.ಎಫ್.ಐ ಕಿಟ್

		ಮತ್ತು ಅನಾಫಿಲಾಕ್ಸಿಸ್ ಕಿಟ್ ಬಳಸಿ ತಕ್ಷಣವೇ ತುರ್ತುಪರಿಸ್ಥಿತಿಯನ್ನು ನಿರ್ವಹಿಸಿ ವಿಳಂಬ ಮಾಡದೇ ಮೇಲ್ಮಟ್ಟದ ಆಸ್ಪತ್ರೆಗೆ ಸೂಚಿಸಲಾಗುತ್ತಿದೆ. 5. ಲಸಿಕೆ ನೀಡಿದ ನಂತರ ಲಸಿಕಾ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯಾಧಿಕಾರಿಗಳ ದೂರವಾಣಿ ಸಂಖ್ಯೆಯನ್ನು ಪ್ರತಿಯೊಬ್ಬ ಫಲಾನುಭವಿಗೆ ನೀಡಲಾಗುತ್ತಿದೆ. ಮತ್ತು ಮನೆಗೆ ತೆರಳಿದ ನಂತರ ಯಾವುದಾದರೂ ಅಡ್ಡ ಪರಿಣಾಮಗಳು ಉಂಟಾದರೆ ನೀಡಿದ ದೂರವಾಣಿ ಸಂಖ್ಯೆಗೆ ಅಥವಾ 104 ಸಹಾಯವಾಣಿಗೆ ಸಂಪರ್ಕಿಸಲು ತಿಳಿಸಲಾಗುತ್ತಿದೆ. 6. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎಇಎಫ್ಐ ಸಮಿತಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಎಇಎಫ್ಐ ಸಮಿತಿ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಇಂತಹ ಎಲ್ಲಾ ಅಡ್ಡಪರಿಣಾಮಗಳ ಪರಿಶೀಲನೆ ನಡೆಸುತ್ತಿದೆ.
ಈ	Covid-19 Vaccine-ಚುಚ್ಚುಮದ್ದು ಪಡೆದ ನಾಗರೀಕರಲ್ಲಿ ಒಂದು ವೇಳೆ ಆರೋಗ್ಯದಲ್ಲಿ ಚೇತರಿಸಿಕೊಳ್ಳಲಾಗದ ದುಷ್ಪರಿಣಾಮಗಳು ಮತ್ತು ಸಾವು-ನೋವುಗಳು ಉಂಟಾದಲ್ಲಿ ಇಂತಹ ನೊಂದ ಸಂತ್ರಸ್ಥರಿಗೆ ಪರಿಹಾರ ಒದಗಿಸಲು ಸರ್ಕಾರ ಸಾಮೂಹಿಕ ಜೀವ ವಿಮೆ ವ್ಯವಸ್ಥೆ ಕಲ್ಪಿಸಿದೆಯೇ; ಅಥವಾ ಸಂಬಂಧಿಸಿದ Covid Vaccine ಉತ್ಪಾದಕರೊಂದಿಗೆ ಇಂತಹ ಪ್ರಕರಣಗಳಲ್ಲಿ ಪರಿಹಾರ ನೀಡುವಂತೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ; ಇಂತಹ ಸಾವು-ನೋವು ಪ್ರಕರಣಗಳಲ್ಲಿ ಸರ್ಕಾರ ಸಂತ್ರಸ್ಥರಿಗೆ, ಸಂತ್ರಸ್ಥರ ಕುಟುಂಬದ ನೆರವಿಗಾಗಿ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)	ಭಾರತ ಸರ್ಕಾರದ ಮಾರ್ಗಸೂಚಿಯಂತೆ, PM-JAY, CGHS ಮತ್ತು AB-Ark ಎಂಪ್ಯಾನಲ್ ಆಗಿರುವ ಆರೋಗ್ಯ ಕೇಂದ್ರಗಳನ್ನು ಕೋವಿಡ್ -19 ಲಸಿಕಾ ಕೇಂದ್ರಗಳನ್ನಾಗಿ ಆಯ್ದುಕೊಳ್ಳಲಾಗಿದೆ. ಈ ಕೇಂದ್ರಗಳಲ್ಲಿ ಲಸಿಕಾಕರಣದ ನಂತರ ಉಂಟಾಗುವ ಅಡ್ಡ ಪರಿಣಾಮಗಳಿಗೆ ಬಿಪಿಎಲ್ ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಆಯುಷ್ಮಾನ್ ಆರೋಗ್ಯ ಕರ್ನಾಟಕ ಯೋಜನೆಯಡಿ ಉಚಿತ ಚಿಕಿತ್ಸೆ ನೀಡಲಾಗುವುದು ಮತ್ತು ಎಪಿಎಲ್ ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಚಿಕಿತ್ಸಾ ವೆಚ್ಚದ ಶೇ.30 ರಷ್ಟನ್ನು ಸರ್ಕಾರ ಭರಿಸುತ್ತದೆ. ಇದನ್ನು ಹೊರತುಪಡಿಸಿ ಯಾವುದೇ ಸಾಮೂಹಿಕ ಜೀವ ವಿಮೆ ವ್ಯವಸ್ಥೆ ಅಥವಾ covid-vaccine ಉತ್ಪಾದಕರೊಂದಿಗೆ ಪರಿಹಾರ ಕುರಿತ ಒಪ್ಪಂದ ಏರ್ಪಟ್ಟಿರುವುದಿಲ್ಲ. ಸಾವಿನ ಪ್ರಕರಣಗಳಲ್ಲಿ ನೆರವು ನೀಡುವ ಕುರಿತು ಭಾರತ ಸರ್ಕಾರದಿಂದ ಯಾವುದೇ ಮಾರ್ಗಸೂಚಿ ಬಂದಿರುವುದಿಲ್ಲ.

ಆಕುಕ 39 ಎಸ್‌ಎಂಎಂ 2021

(ಡಾ|| ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು